ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕೊಡಗು, ಮಡಿಕೇರಿ
ಓ.ಎಸ್.ನಂ ಃ117/2015

ಡಿ.ಡಬ್ಲ್ಯು ಃ 3

ಸಾಕ್ಷಿದಾರರ ಹೆಸರು ಃ ಎಂ. ಎ. ನಿರಂಜನ್
ತಂದೆಯ ಹೆಸರು ಃ ಲೇಟ್ ಅಣ್ಣಪ್ಪ
ಪ್ರಾಯ ಃ 50 ವರ್ಷ
ಉದ್ಯೋಗ ಃ ವಕೀಲರು
ವಾಸಸ್ಥಳ ಃ ಮಡಿಕೇರಿ

ದಿಃ 07.01.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಮೂರನೇ ಪ್ರತಿವಾದಿ ಪರ ವಕೀಲರಿಂದಃ

ನಾನು ಕಳೆದ 27 ವರ್ಷದಿಂದ ಮಡಿಕೇರಿಯಲ್ಲಿ ವಕೀಲ ವೃತ್ತಿಯನ್ನು ಮಾಡುತ್ತಿದ್ದೇನೆ. ನಾನು ನನ್ನ ವಕೀಲ ವೃತ್ತಿಯ ಜೊತೆಗೆ ದಸ್ತಾವೇಜುಗಳನ್ನು ಕೂಡಾ ಮಾಡುತ್ತೇನೆ. ನಾನು ಈ ಕೇಸಿನ 1 ಮತ್ತು 3 ನೇ ಪ್ರತಿವಾದಿ ಪರ ನ್ಯಾಯಾಲಯಕ್ಕೆ ಹಾಜರಾಗಿದ್ದೆನು. ಈ ದಾವೆ ವಿಚಾರಣೆಯಲ್ಲಿ ಇರುವಾಗಲೇ 1 ನೇ ಪ್ರತಿವಾದಿಯವರು ಮೇ 2017 ರ 2 ನೇ ವಾರದಲ್ಲಿ ನನ್ನ ಕಛೇರಿಗೆ ಬಂದು ಒಂದು ವಿಲ್ ನಾಮೆಯನ್ನು ಮಾಡಿಕೊಡುವುದಾಗಿ ಕೇಳಿಕೊಂಡಿದ್ದರು. 1 ನೇ ಪ್ರತಿವಾದಿಯಿಂದ ವಿಲ್ ನಾಮೆ ಮಾಡುವ ಮೊದಲು ಮಾಹಿತಿಯನ್ನು ಪಡೆದುಕೊಂಡು ವಿಲ್ ನಾಮೆಯನ್ನು ತಯಾರಿಸಿರುತ್ತೇನೆ ಹಾಗೂ ವಿಲ್ ನಾಮೆಯನ್ನು ನೊಂದಾವಣೆ ಮಾಡುವ ಸಲುವಾಗಿ ದಿಃ30.05.2017 ಎಂದು ನಿಗಧಿಪಡಿಸಿದ್ದೆನು.

ದಿಃ 30.05.2017 ರಂದು 1 ನೇ ಪ್ರತಿವಾದಿಯವರು ಬೆಳಿಗ್ಗೆ ನನ್ನ ಕಛೇರಿಗೆ ಬಂದಿದ್ದು ನಾನು ಅವರನ್ನು ಮಡಿಕೇರಿಯ ನೊಂದಾವಣೆ ಕಛೇರಿಗೆ ಬೆಳಿಗ್ಗೆ 10.00 ಗಂಟೆಗೆ ಬರಲು ತಿಳಿಸಿದ್ದೆನು. ನಾನು ಮಡಿಕೇರಿಯ ನೊಂದಾವಣೆ ಕಛೇರಿಗೆ ಹೋಗಿದ್ದು ಆ ಸಮಯದಲ್ಲಿ 1 ನೇ ಪ್ರತಿವಾದಿ ಇಬ್ಬರು ಸಾಕ್ಷಿದಾರರಾದ ಈರಪ್ಪ ಮತ್ತು ಸತೀಶ್ ಎಂಬುವವರನ್ನು ಕರೆದುಕೊಂಡು ಬಂದಿದ್ದರು.

ನಾನು ವಿಲ್ ನಾಮೆಯನ್ನು ಇಂಗ್ಲಿಷ್‌ನಲ್ಲಿ ತಯಾರಿಸಿದ್ದರಿಂದ ಅದನ್ನು ಕನ್ನಡದಲ್ಲಿ ಭಾಷಾಂತರ ಮಾಡಿ 1ನೇ ಪ್ರತಿವಾದಿಯವರಿಗೆ ಓದಿ ತಿಳಿಸಿರುತ್ತೇನೆ. ನಂತರದಲ್ಲಿ 1ನೇ ಪ್ರತಿವಾದಿಯವರು ವಿಲ್ ನಾಮೆಯ ಎಲ್ಲಾ ಪುಟಗಳಿಗೆ ತಮ್ಮ ಸಹಿಯನ್ನು ಮಾಡಿದರು. 1ನೇ ಪ್ರತಿವಾದಿಯವರು ವಿಲ್ ನಾಮೆಗೆ ಸಹಿಯನ್ನು ಮಾಡುವಾಗ ನಾನು ಮತ್ತು ಇಬ್ಬರು ಸಾಕ್ಷಿದಾರರು ಇದ್ದೆವು. 1ನೇ ಪ್ರತಿವಾದಿ ವಿಲ್ ನಾಮೆಗೆ ಸಹಿ ಮಾಡಿದ ನಂತರದಲ್ಲಿ ಸಾಕ್ಷಿದಾರರಾದ ಈರಪ್ಪರವರು ಮತ್ತು ಸತೀಶ್ ಸಹಿ ಮಾಡಿದರು. ಸದರಿ ಸಾಕ್ಷಿದಾರರಾದ ಈರಪ್ಪ ಮತ್ತು ಸತೀಶ್ ರವರು ಸಹಿ ಮಾಡುವಾಗ 1ನೇ ಪ್ರತಿವಾದಿ ಮತ್ತು ನಾನು ಇದ್ದೆವು. 1ನೇ ಪ್ರತಿವಾದಿ ಮತ್ತು ಇಬ್ಬರು ಸಾಕ್ಷಿದಾರರು ಸಹಿ ಮಾಡಿದ ನಂತರದಲ್ಲಿ ನಾನು ವಿಲ್ ನಾಮೆಗೆ ಸಹಿ ಮಾಡಿರುತ್ತೇನೆ. ನಂತರದಲ್ಲಿ 1ನೇ ಪ್ರತಿವಾದಿ ಸಹಿ ಮಾಡಿದಂತಹ ವಿಲ್ ನಾಮೆಯನ್ನು ನೊಂದಾವಣೆ ಅಧಿಕಾರಿಗೆ ನೀಡಿದರು. ನೊಂದಾವಣೆ ಪ್ರಕ್ರಿಯೆ ಮುಗಿದ ನಂತರದಲ್ಲಿ ವಿಲ್ ನಾಮೆಯ ಮೊದಲನೇ ಪುಟದ ಹಿಂಭಾಗದಲ್ಲಿ 1ನೇ ಪ್ರತಿವಾದಿ ಸಹಿ ಮಾಡಿದರು. ನಂತರದಲ್ಲಿ ವಿಲ್ ನಾಮೆಯ ಎರಡನೇ ಪುಟದ ಹಿಂಭಾಗದಲ್ಲಿ ಇಬ್ಬರೂ ಸಾಕ್ಷಿದಾರರು ಸಹಿ ಮಾಡಿದರು.

1ನೇ ಪ್ರತಿವಾದಿ ಮತ್ತು ಸಾಕ್ಷಿದಾರರ ಸಹಿಗಳನ್ನು ನಾನು ನೋಡಿದರೆ ಗುರುತಿಸುತ್ತೇನೆ. ಅದೇ ರೀತಿ ನನ್ನ ಸಹಿಯನ್ನು ನೋಡಿದರೂ ಕೂಡಾ ಗುರುತಿಸುತ್ತೇನೆ. ನಿಡಿ 10 ವಿಲ್ ನಾಮೆಯನ್ನು ಸಾಕ್ಷಿ ನೋಡಿ ತಾನು ತಯಾರಿಸಿದಂತಹ ವಿಲ್ ನಾಮೆ ಎಂದು ಒಪ್ಪಿಕೊಂಡಿರುತ್ತಾರೆ. ನಿಡಿ 10 ರಲ್ಲಿ ಇರುವ 1ನೇ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. 1ನೇ ಪ್ರತಿವಾದಿಯ ಸಹಿಗಳನ್ನು ಈಗಾಗಲೇ ನಿಡಿ 10(ಎ) ಯಿಂದ (ಸಿ) ಎಂದು ಮತ್ತು 10(ಇ), ಎಫ್ ಎಂದು ಗುರುತಿಸಲಾಗಿದೆ.

ನಿಡಿ 10ರಲ್ಲಿ ಈರಪ್ಪರವರ ಸಹಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸದರಿಯವರ ಸಹಿಗಳನ್ನು ನಿಡಿ 10(ಹೆಚ್) ಮತ್ತು (ಐ) ಎಂದು ಗುರುತಿಸಲಾಗಿದೆ.

ನಿಡಿ 10 ರಲ್ಲಿ ಸತೀಶ್‌ರವರ ಸಹಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸದರಿಯವರ ಸಹಿಗಳನ್ನು ಈಗಾಗಲೇ ನಿಡಿ 10(ಡಿ) ಮತ್ತು (ಜಿ) ಎಂದು ಗುರುತಿಸಲಾಗಿದೆ. ನಿಡಿ 10 ರಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ತನ್ನ ಸಹಿ ಎಂದು ಒಪ್ಪಿದ ಮೇರೆಗೆ ನಿಡಿ 10(ಜೆ) ಎಂದು ಗುರುತಿಸಲಾಗಿದೆ.

**ಪಾಟೀ ಸವಾಲಿಗೆ ವಕೀಲರ ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಗಿದೆ.**

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.
ಸಹಿ/-
(ಶ್ರೀಮತಿ ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.